

ನೆಲಮುಗಿಲು ನಾಟಕದ ದೃಶ್ಯ

### ನಾ ಕಂಡ ಸ್ವಾಯತ್ತ ರಂಗಭೂಮಿ

ಇವತ್ತು ರಂಗಭೂಮಿ ಮೂಲಕ ಏನೆಲ್ಲ ಹೇಳುವ ಸ್ವಾತಂತ್ರ್ಯ ಇದೆ. ಸ್ವಾತಂತ್ರ್ಯ ಪೂರ್ವದಲ್ಲಿ ಒಂದು ನಾಟಕವನ್ನು ಆಡಲು ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳಬೇಕಿತ್ತು ಎನ್ನುವುದನ್ನು ಕೇಳಿದ್ದೇನೆ. ಅಂದರೆ ನಮ್ಮ ಈ ಸ್ವಾತಂತ್ರ್ಯದ ಮಹತ್ವ ಏನು ಎಂದು ಗೊತ್ತಾಗುತ್ತದೆ.



ರಂಗಭೂಮಿಯನ್ನು ಸ್ವಯಂ ಅಧ್ಯಯನ ಮತ್ತು ಅನುಭವದಿಂದ ಕಲಿಯುತ್ತಿದ್ದೇನೆ. ನನ್ನ ನಾಟಕದಲ್ಲಿ ಹರಿಕತೆಯ ಎಳೆಯನ್ನೂ ಬಳಸಿಕೊಂಡಿದ್ದೇವೆ. ರಂಗಭೂಮಿಯ ಸವಾಲುಗಳು ಸಾಕಷ್ಟು ಇದ್ದರೂ ವಿಚಾರವನ್ನು ದಾಟಿಸಲು ಸಾಕಷ್ಟು ಸಾಧ್ಯತೆಯೂ ಇದೆ. ವ್ಯವಸ್ಥೆಯ ಎಲ್ಲ ರಂಗದಲ್ಲೂ ಸರಿಯಾದ ನಾಯಕರ ಕೊರತೆ ಇದೆ ಎಂದು ಅನ್ನಿಸಿದೆ. ಯಾವುದೇ ಸಿದ್ಧಾಂತಗಳು ಆಯಾ ಕಾಲಕ್ಕೆ, ಅಗತ್ಯಕ್ಕೆ ಹುಟ್ಟಿಕೊಂಡಿವೆ. ಎಲ್ಲವನ್ನೂ ಮೀರಿ ಮನುಷ್ಯತ್ವವನ್ನು ಇಟ್ಟುಕೊಳ್ಳಬೇಕೆಂಬುದನ್ನು ರಂಗಭೂಮಿ ಮಾಡಬೇಕಿದೆ. ಅದು ನಿರಂತರವಾಗಿ ನನ್ನನ್ನು ಕಾಡುತ್ತಿದೆ.

ನನ್ನ ತಂಡದಲ್ಲಿ ವಿದ್ಯಾರ್ಥಿಗಳೇ ಹೆಚ್ಚಿದ್ದಾರೆ. ಅವರಿಗೆ ಈಸೂರಿನ ಹೋರಾಟವನ್ನು ಪರಿಚಯ ಮಾಡಬೇಕಿತ್ತು, ಅದೇ ರಕ್ತ ಧ್ವಜ.

—ದಾಕ್ಷಾಯಿಣಿ ಭಟ್, ರಂಗ ನಿರ್ದೇಶಕಿ

ಉದ್ದೇಶಿತ ಆಶಯಗಳ ವೈಫಲ್ಯವನ್ನು ಗುರುತಿಸುತ್ತಾರೆ. ಕೊನೆಗೆ ಅವರೇ ಒಂದು ಕೊಲೆಯ ಅಪರಾಧಿ ಆಗುತ್ತಾರೆ. ಆಗ ಅಮಾಯಕರು, ಅಸಹಾಯಕರನ್ನು ದೋಚುವ ದುಷ್ಟರನ್ನು ಸಂಹರಿಸಲು ಮತ್ತೆ ಹುಟ್ಟುತ್ತೇನೆ ಎನ್ನುತ್ತಾರೆ. ಗಾಂಧಿ ತಮ್ಮ ಅವತಾರ ಆಯುಧ ಸ್ವರೂಪದಲ್ಲಿ ಇರುತ್ತದೆ. ನನ್ನ ತಾಯಿ ನೆಲದ ರಕ್ಷಣೆಗಾಗಿ ಮನೆ ಮನೆಯಲ್ಲಿ ಚೈತನ್ಯ ಸ್ವರೂಪಿಯಾಗಿ ಬರುತ್ತೇನೆ ಎನ್ನುತ್ತಾರೆ. ರಾಷ್ಟ್ರಪಿತನಿಗೆ ಮರಣ ದಂಡನೆಯ ತೀರ್ಪಿಗೆ ಧಿಕ್ಕಾರ ಎಂದು ಗಾಂಧಿವಾದಿ ಕೂಗುತ್ತಾ ಕುಸಿಯುತ್ತಾರೆ.

### ಏಸೂರು ಕೊಟ್ಟರೂ ಈಸೂರು ಕೊಡೆವು

ಬಸವರಾಜ್ ಕಟ್ಟೀಮನಿ ಅವರ ರಕ್ತ ಧ್ವಜ ಕಥೆ, ಬಸವರಾಜ್ ಆರ್. ಅವರ ಈಸೂರಿನ ಚಿರಂಜೀವಿಗಳು ಕಾದಂಬರಿಯನ್ನು ಆಧರಿಸಿ ದಾಕ್ಷಾಯಿಣಿ ಭಟ್ 'ರಕ್ತ ಧ್ವಜ' ನಾಟಕ ರಚಿಸಿ ನಿರ್ದೇಶಿಸಿದ್ದಾರೆ. ಇದುವರೆಗೆ 47 ಪ್ರದರ್ಶನ ಕಂಡಿರುವ ಈ ನಾಟಕ, ಸ್ವಾತಂತ್ರ್ಯ ಚಳವಳಿಗೆ ರೈತರು–ಮಹಿಳೆಯರ ಅಪೂರ್ವ ಕೊಡುಗೆಯನ್ನು ಸ್ಮರಿಸುತ್ತದೆ.

ದೇಶದಲ್ಲಿ ಪ್ರಪ್ರಥಮ ಸ್ವಾತಂತ್ರ್ಯವನ್ನು ಘೋಷಿಸಿಕೊಂಡ ಶಿವಮೊಗ್ಗ ಜಿಲ್ಲೆಯ ಪುಟ್ಟ ಹಳ್ಳಿ ಈಸೂರು. 'ಏಸೂರು ಕೊಟ್ಟರೂ ಈಸೂರು ಕೊಡೆವು' ಎಂಬ ಘೋಷವಾಕ್ಯದೊಂದಿಗೆ ಉಗ್ರ ರೂಪ ತಾಳಿದ ಚಳವಳಿ ಕೊನೆಗೂ ಸ್ವತಂತ್ರವಾಯಿತು. ಕೃಷಿ ಪ್ರಧಾನ ಗ್ರಾಮದಲ್ಲಿ ಬ್ರಿಟಿಷ್ ಅಧಿಕಾರಿಗಳನ್ನು ಮಣಿಸಿ ತಮ್ಮ ಗ್ರಾಮ ಸ್ವರಾಜ್ಯವನ್ನು ಆ ಊರ ರೈತರು ಸ್ಥಾಪಿಸಿದರು. ಅದರಿಂದ ಕೋಪಿತಗೊಂಡ ಸರ್ಕಾರ ಹಿಂಸಾಚಾರದ ಮೂಲಕ ಅದಕ್ಕೆ ಉತ್ತರ ನೀಡುತ್ತದೆ. ಈ ನಾಟಕ ಸ್ವಾತಂತ್ರ್ಯ ಚಳವಳಿಗೆ ಸಾಮಾನ್ಯರು ದೊಡ್ಡ ನೆರವನ್ನು ನೀಡಿದ್ದಾರೆ ಎನ್ನುವುದನ್ನು ಹೇಳುತ್ತದೆ. ■


